ಅ) ಚಿಕ್ಕನಾಯಕನಹಳ್ಳಿ ತಾಲ್ಲೂಕು ಹುಳಿಯಾರು ಗ್ರಾಮಕ್ಕೆ ಪ್ರಸೂತಿಗೃಹ ಮಂಜೂರು ಮಾಡಲು ಬಹಳ ಹಿಂದೆ 80,000ರೂ.ಗಳನ್ನು ಹುಳಿಯಾರು ಪಂಚಾಯಿತಿಯಿಂದ ಠೇವಣಿ ಇಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹುಳಿಯಾರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಮಹಿಳಾ ವೈದ್ಯಾಧಿಕಾರಿಗಳ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಹಾಗಿದ್ದಲ್ಲಿ ಹುಳಿಯಾರ್ ಗ್ರಾಮಕ್ಕೆ ಹೆರಿಗೆ ಆಸ್ಪತ್ರೆ ಮತ್ತು ಮಹಿಳಾ ವೈದ್ಯಾಧಿಕಾರಿಗಳ ಹುದ್ದೆ ಮಂಜೂರು ಮಾಡಲು ಸರಕಾರ ಕ್ರಮ ಕೈಗೊಳ್ಳಲಾಗುವುದೆ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ರೂ. 70,500-00 ಮಾತ್ರ ಠೇವಣಿಯಾಗಿಟ್ಟಿರುತ್ತಾರೆ.

ಆ) ಇಲ್ಲ.

ಇ) ತುಮಕೂರು ಜಿಲ್ಲಾ ಪರಿಷತ್‌ನಿಂದ ಪ್ರಸ್ತಾವನೆ ಸ್ವೀಕೃತವಾದಲ್ಲಿ ಪರಿಶೀಲಿಸಲಾಗುವುದು.

ನೇತ್ರ ಚಿಕಿತ್ಸೆಯಲ್ಲಿ ಸರ್ಕಾರಿ ಆಯುರ್ವೇದ ಆಸ್ಪತ್ರೆ ಒಳ್ಳೆ ಫಲಿತಾಂಶವನ್ನು ನೀಡಿರುವುದು.

3692 - ಶ್ರೀ ಮನೋಹರ್ ಐನಾಪುರ್ (ಬಳ್ಳೊಳ್ಳಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೇತ್ರ ಚಿಕಿತ್ಸೆಯಲ್ಲಿ ಸರ್ಕಾರಿ ಆಯುರ್ವೇದ ಆಸ್ಪತ್ರೆ, ಬಿಜಾಪುರವು ಒಳ್ಳೆ ಫಲಿತಾಂಶವನ್ನು ನೀಡಿದೆ ಎಂಬ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸುಮಾರು 500 ರೋಗಿಗಳು ಈ ಆಸ್ಪತ್ರೆಗೆ ನೇತ್ರ ಚಿಕಿತ್ಸೆ ಪಡೆಯಲು ಬರುತ್ತಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಗಮನಕ್ಕೆ ಬಂದಲ್ಲಿ ಸೂಕ್ತ ಆಯವ್ಯಯ ಸಿಬ್ಬಂದಿ ಮತ್ತು ಸಾಧನ ಸಾಮಗ್ರಿ ಸಲಕರಣೆಗಳನ್ನು ಈ ಆಸ್ಪತ್ರೆಗೆ ಒದಗಿಸದೇ ಇರುವುದಕ್ಕೆ ಕಾರಣವೇನು?

ಈ) ಸದರಿ ಸೌಲಭ್ಯಗಳನ್ನು ಒದಗಿಸಲಾಗುವುದೇ

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಬಂದಿದೆ.

ಆ) ಬಂದಿದೆ.

ಇ) ಸದರಿ ಆಸ್ಪತ್ರೆಯ ಆಯವ್ಯಯದ ಅಂದಾಜಿಗೆ ಪೂರಕವಾಗಿ ಬೇಡಿಕೆಗೆ ಅನುಗುಣವಾಗಿ ಸೂಕ್ತ ಆಯವ್ಯಯವನ್ನು ನೀಡಲಾಗಿದೆ. ಅದೇ ರೀತಿ ವೈದ್ಯಾಧಿಕಾರಿಗಳ ಕೋರಿಕೆಯ ಮೇರೆಗೆ ಅಗತ್ಯ ಸಾಧನ ಸಾಮಗ್ರಿ ಸಲಕರಣೆಗಳನ್ನು ಪೂರೈಸಲಾಗಿದೆ. ನೇತ್ರ ಚಿಕಿತ್ಸೆಗೆ ಸಂಬಂಧಪಟ್ಟಂತೆ ಸಿಬ್ಬಂದಿ ಕೊರತೆ ಇರುವುದಿಲ್ಲ. ಒಬ್ಬರು ದಾದಿ, ಒಬ್ಬರು ಔಷಧಿ ವಿತರಕರು ಹಾಗು ಮೂರು ಗ್ರೂಪ್ -ಡಿ ಹುದ್ದೆಗಳನ್ನು ಮಾತ್ರ ಸದರಿ ಆಸ್ಪತ್ರೆಯಲ್ಲಿ ಖಾಲಿ ಇರುವುದರಿಂದ, ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಈ) ಒದಗಿಸಲಾಗಿದೆ.